ಸಂಗತಿಯಾಗಿ ನೀನು ನನ್ನ ಪಕ್ಕದಲ್ಲಿ ಕುಳಿತಿರುವುದು ನನಗೆ ಖುಷಿಯೆನಿಸಿದೆ...' ಸಹಜವಾಗಿಯೇ ನುಡಿದಿದ್ದೆ ನಾನು.

'ಓಹ್! ಕಳೆದುಕೊಳ್ಳುವುದರಿಂದ ಪಡೆಯುವುದೂ ಸತ್ಯ; ಪಡೆಯುವುದರಿಂದ ಕಳೆದುಕೊಳ್ಳುವುದೂ ಸತ್ಯ. ಹಸಿವು ಮತ್ತು ಕಾಮಗಳಲ್ಲದೆ ಮನುಷ್ಯನನ್ನು ಮತ್ತೇನೋ ಬಲವಾಗಿ ಕಾಡುತ್ತಿದೆ. ಬಹುಶಃ ಅದು ಮನಸ್ಸು ಮತ್ತು ಆತ್ಮಗಳ ರೂಪದಲ್ಲಿರಬಹುದು. ನಾವು ದೇಹಗಳನ್ನು ತೃಪ್ತಿಪಡಿಸಬಹುದು ಆದರೆ ಮನಸ್ಸು ಮತ್ತು ಆತ್ಮಗಳನ್ನು ತೃಪ್ತಿಪಡಿಸಲಾಗುವುದಿಲ್ಲ. ಆದ್ದರಿಂದಲೇ ಪ್ರಾಣಿ, ಪಕ್ಷಿ, ಜಂತುಗಳು ಅನುಭವಿಸದ ಸಂಕಷ್ಟಗಳನ್ನು ಹತಾಶೆಗಳನ್ನು ಮನುಷ್ಯ ಅನುಭವಿಸುತ್ತಿರುವುದು. ಐಡೆಂಟಿಟಿ ಕ್ರೈಸಿಸ್, ಎಕನಾಮಿಕ್ ಕ್ರೈಸಿಸ್, ಪೊಲಿಟಿಕಲ್ ಕ್ರೈಸಿಸ್, ಸೋಷಿಯಲ್ ಕ್ರೈಸಿಸ್ ಮುಂತಾದ ಎಲ್ಲಾ ಸಂಘರ್ಷಗಳೂ ಮನಸ್ಸು ಮತ್ತು ಆತ್ಮಗಳೆಂದು ಕರೆಯಲ್ಪಡುವ ಅವ್ಯಕ್ತ ಮತ್ತು ಅದೃಶ್ಯ ವಿದ್ಯಮಾನಗಳಿಂದಲೇ ಉಂಟಾಗುತ್ತಿರುವುದೆಂಬುದು ಸಾರ್ವತ್ರಿಕ ಸತ್ಯ...' ಅವಳ ಮಾತುಗಳಲ್ಲಿ ಆಧ್ಯಾತ್ಮಿಕ ಜಿಜ್ಞಾಸೆಯ ನೆರಳು ದಟ್ಟವಾಗಿರುವುದು ನನಗೆ ಮನದಟ್ಟಾಗಿತ್ತು.

'ಅಧ್ಯಯನಶೀಲ ಆಳದ ನಿಮ್ಮ ಮಾತುಗಳಲ್ಲಿ ಎಂಥದ್ದೊ ಮಾಂತ್ರಿಕತೆಯ ಅದ್ಭುತವಾದ ಸ್ಪರ್ಶ ತುಂಬಿಕೊಂಡಿದೆ...' ಅವಳ ಬಗ್ಗೆ ಹೆಮ್ಮೆಯಿಂದಲೇ ಹೇಳಿದ್ದೆ.

'ರಾಘವ ಪಂತುಲು ಬ್ಲಡ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ...' ಹಠಾತ್ತನೆ ಬಂದ ಅವಳ ಬಾಯಿ ಮಾತಿನಿಂದ ನಾನು ತಬ್ಬಿಬ್ಬಾಗಿದ್ದೆ.

'ವ್ವಾಟ್ ಡು ಯು ಮೀನ್...' ನನಗರಿಯದೆ ನನ್ನ ಬಾಯಿಂದ ಮಾತುಗಳು ಹೊರ ಬಿದ್ದಿದ್ದವು.

'ರಾಘವ ಪಂತುಲನ್ನು ನಾನು ಬಾಲ್ಯದಿಂದಲೇ ಬಲ್ಲೆ. ಬಹಳ ವರ್ಷಗಳಿಂದಲೂ ನಮ್ಮ ಫ್ಯಾಮಿಲಿಗೆ ಪೊಲಿಟಿಕಲ್ ಅಡ್ವೈಜರ್. ಒಬ್ಬ ಸೃಜನಶೀಲ ಪವರ್ ಬ್ರೋಕರ್. ಅಪ್ಪನಿಗೆ ನನ್ನನ್ನು ಸಿನಿಮಾ ಹೀರೋಯಿನ್ ಮಾಡಬೇಕೆಂಬ ಮಹದಾಸೆಯಿತ್ತು. ಕೋಟೆಯಂಥ ನಮ್ಮ ಮನೆಯಲ್ಲಿ, ನಮ್ಮ ನೂರಾರು ಎಕರೆ ಗದ್ದೆ ತೋಟಗಳಲ್ಲಿ ಒಂದಲ್ಲ ಒಂದು ಸಿನಿಮಾ ಶೂಟಿಂಗ್ ನಡೆಯುತ್ತಲೇ ಇರುತ್ತದೆ. ಶೂಟಿಂಗ್ ನಡೆಯುವಾಗ ಪ್ರತಿಯೊಬ್ಬರಿಗೂ ನಮ್ಮ ಮನೆಯಲ್ಲಿಯೇ ಆತಿಥ್ಯ. ಚಿರಂಜೀವಿಯಂಥ ದೊಡ್ಡ ದೊಡ್ಡ ಸ್ಟಾರ್‌ಗಳೂ ಅಪ್ಪನೊಂದಿಗೆ ಊಟ ಮಾಡಿ ಕಾಲ ಕಳೆಯಲು ಕಾತರಿಸುತ್ತಿದ್ದರು. ನನ್ನನ್ನು ನೋಡಿದ ದೊಡ್ಡ ದೊಡ್ಡ ಡೈರೆಕ್ಟರ್‌ಗಳು, ಪ್ರೊಡ್ಯೂಸರ್‌ಗಳು ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಲು ನನ್ನನ್ನು ಒಪ್ಪಿಸುವಂತೆ ಅಪ್ಪನನ್ನು ಪುಸಲಾಯಿಸಿದ್ದರು. ನನಗೆ ಮಾತ್ರ ನನ್ನ ಕಣ್ಮುಂದೆ ಹರಡಿಕೊಂಡಿದ್ದ ನೂರಾರು ಎಕರೆ ಭತ್ತದ ಗದ್ದೆಗಳು, ಕಬ್ಬು ಮತ್ತು ತೆಂಗಿನ ತೋಟಗಳು ಮತ್ತು ಅವುಗಳಲ್ಲಿ ಶ್ರಮಪಟ್ಟು ಕೆಲಸ ಮಾಡುತ್ತಿದ್ದ ರೈತರು, ಅವರ ಖುಷಿ– ಸಂಕಟಗಳು ಇನ್ನಿಲ್ಲದಷ್ಟು ಇಷ್ಟವಾಗತೊಡಗಿದ್ದವು. ಒಮ್ಮೆ ನೂರಾರು ಎಕರೆ ಭತ್ತ ಯಾವುದೋ ರೋಗಕ್ಕೆ ತುತ್ತಾಗಿ ಕಮರಿ ಹೋದಾಗ ಅಪ್ಪನಿಗಿಂತಲೂ ಜೋರಾಗಿ ಬಿಕ್ಕಿ ಬಿಕ್ಕಿ ಅತ್ತಿದ್ದೆ. ಈ ಏಳೆಂಟು ವರ್ಷಗಳಿಂದ ಭತ್ತದ ಇಳುವರಿ ವಿಪರೀತ ಕಡಿಮೆಯಾಗಿದೆ. ರಾಸಾಯನಿಕ ಗೊಬ್ಬರಗಳನ್ನು, ಕ್ರಿಮಿ–ಕೀಟ ನಾಶಕಗಳನ್ನು ಬಳಸಿ ಬಳಸಿ ಭೂಮಿ ಮತ್ತು ಪರಿಸರಗಳು ತಮ್ಮ **immunity**ಯನ್ನೆ ಕಳೆದುಕೊಂಡುಬಿಟ್ಟಿವೆ. ಭತ್ತದ ಬೆಲೆಗಿಂತಲೂ ಅದರ ಪ್ರೊಡಕ್ಷನ್ ಕಾಸ್ಟ್ ಎರಡು ಮೂರುಪಟ್ಟು ಅಧಿಕವಾಗುತ್ತದೆ. ಸಣ್ಣಪುಟ್ಟ ರೈತರಂತೂ ಕಂಗೆಟ್ಟು ಕೂತಿದ್ದಾರೆ. ಆರ್ಗೇನಿಕ